## ಬೇರೆ ಕಾರಣ ಸಿಗಲಿಲ್ಲವೇ ?

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬ್ರಹ್ಮಗಂಟು' ಧಾರಾವಾಹಿಯಲ್ಲಿ ಮಾವ ತನ್ನ ಇಬ್ಬರು ಮಕ್ಕಳನ್ನು ವಿದೇಶಕ್ಕೆ ಕಳುಹಿಸುವ ಏರ್ಪಾಡು ಮಾಡಿರುತ್ತಾನೆ. ಆದರೆ ಅವನ ಹೆಂಡತಿಗೆ ಇದು ಇಷ್ಟ ಇರುವುದಿಲ್ಲ. ಅದನ್ನು ತಡೆಯಲು ನಾನಾ ಉಪಾಯಗಳನ್ನು ಮಾಡುತ್ತಾಳೆ. ಆದರೆ ಯಶಸ್ಸು ಕಾಣುವುದಿಲ್ಲ. ಕೊನೆಗೆ ಹೋಗುವ ದಿನ ಬಂದೇ ಬಿಡುತ್ತದೆ. ಇದನ್ನು ತಡೆಯಲೇ ಬೇಕು ಎಂದು ತೀರ್ಮಾನಿಸಿ ಗಂಡನ ಜೊತೆ ಮಕ್ಕಳನ್ನು ವಿಮಾನ ನಿಲ್ದಾಣಕ್ಕೆ ಬಿಡಲು ಹೊರಡುತ್ತಾಳೆ. ದಾರಿಯಲ್ಲಿ ಇದ್ದಕ್ಕಿದ್ದಂತೆ ಅವಳಿಗೆ ಹುಷಾರು ತಪ್ಪುತ್ತದೆ. ಮಕ್ಕಳು ವಿಮಾನ ನಿಲ್ದಾಣಕ್ಕೆ ಹೋಗುವುದನ್ನು ಬಿಟ್ಟು ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ನೋಡಿದರೆ ತಾಯಿ ಗರ್ಭಿಣಿ. ಇದರಿಂದ ಅವರ ಪ್ರವಾಸ ರದ್ದಾಗುತ್ತದೆ. ವಿಷಯ ಅದಲ್ಲ, ಬೇರೆ ಯಾವ ಕಾರಣವೂ ಸಿಗಲಿಲ್ಲವೇ ಕಥೆಗಾರರಿಗೆ? ಇದರ ಬಗ್ಗೆ ನಗಬೇಕೋ ಅಳಬೇಕೋ ತಿಳಿಯದೆ ಮನಸ್ಸು ಗೊಂದಲವಾಯಿತು.

– ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ಮುಂದಿನ ನಡೆ ಕುತೂಹಲಕಾರಿ

'ಮಗಳು ಜಾನಕಿ'ಯಲ್ಲಿ ಯಾರೇ ಆದರೂ ತಮ್ಮವರ ಬಗ್ಗೆ ಸುಲಭವಾಗಿ ನಂಬದಂಥ ವಿಷಯವನ್ನು ಭಾರ್ಗಿಯ ಎದುರಿಗೆ ಅವನ ಮನೆಯವರಿಗೆ ತಿಳಿಸುವಾಗ ನಿರಂಜನ ಪ್ರದರ್ಶಿಸಿದ ಜಾಣ್ಮೆ, ಭಾರ್ಗಿಯ ಕೆಂಡ ಉಗುಳುವ ಕಣ್ಣುಗಳನ್ನು ನೇರ ದೃಷ್ಟಿಯಿಂದ ಎದುರಿಸಿದ ಧೈರ್ಯ, ಮೆಚ್ಚುಗೆ ಗಳಿಸಿ 'ಶಹಬ್ಬಾಸ್ ನಿರಂಜನ' ಎನ್ನುವಂತೆ ಮಾಡಿದವು.

ಇವರಿಬ್ಬರ ನಡುವಿನ ಚದುರಂಗದಾಟದಲ್ಲಿ ಚಾಣಾಕ್ಷ ಭಾರ್ಗಿಯ ಮುಂದಿನ ನಡೆ ಏನಿರಬಹುದು ಎಂಬುದಕ್ಕೆ ಉಸಿರು ಕಟ್ಟಿ ಕಾಯುವಂತಾಗಿತ್ತು. ಸದ್ಯಕ್ಕಂತೂ ಭಾರ್ಗಿ ತನ್ನ ಚದುರಂಗದಾಟದ ರಾಣಿಯನ್ನು ಮುಂದೆ ನಡೆಸಿ ರಶ್ಮಿಯ ಬಾಯಿ ಮುಚ್ಚಿಸಿ, ತನ್ನ ಮೊಸಳೆ ಕಣ್ಣೀರಿನಿಂದ ಜಾನಕಿಯನ್ನು ದ್ವಂದ್ವಕ್ಕೆ ಸಿಲುಕಿಸಿ ಬೀಸುವ ದೊಣ್ಣೆ ತಪ್ಪಿಸಿಕೊಂಡಿದ್ದಾನೆ.

– ಮೀರಾ ಮೋಹನ್, ಕ್ಯಾಲಿಫೋರ್ನಿಯಾ

ವಾರದ ಪತ್ರ

## ಯಾರಿಗಾಗಿ?

'ಬಿಗ್ ಬಾಸ್' ಕಾರ್ಯಕ್ರಮ ಯಾರಿಗಾಗಿ ಮತ್ತು ಏತಕ್ಕಾಗಿ ಎಂಬ ಪ್ರಶ್ನೆ ನನ್ನನ್ನಂತೂ ಕಾಡುತ್ತಿದೆ. ಇಲ್ಲಿಯವರೆಗಿನ ಬಿಗ್ ಬಾಸ್ ನಲ್ಲಿ ಕೆಲವರು ಟಾಲೆಂಟೆಡ್ ಸ್ಪರ್ಧಿಗಳೊಂದಿಗೆ (ಮಾಳವಿಕಾ, ಕೀರ್ತಿ, ಚಂದನ್ ಶೆಟ್ಟಿ, ನಿರಂಜನ, ಶಾಲಿನಿ, ಸಿಹಿಕಹಿ ಚಂದ್ರು ಇತ್ಯಾದಿ ) ಸಾಧಾರಣ ಸ್ಪರ್ಧಿಗಳನ್ನು ಕೂಡಿ ಹಾಕಿ ಸ್ವಲ್ಪ ಆಸಕ್ತಿಯುತಯಾಗಿ ಮಾಡುವ ಪ್ರಯತ್ನ ನಡೆಸಿದ್ದರು. ಆದರೆ ಈ ಬಾರಿ ಏನೂ ಪ್ರತಿಭೆ ಇಲ್ಲದ ಅತಿ ಸಾಧಾರಣದವರನ್ನು ಸೇರಿಸಿಕೊಂಡು ಅವರಿಗೆ ತೀರ ಬಾಲಿಶ ಕೆಲಸಗಳನ್ನು ಕೊಟ್ಟು ಕಾರ್ಯಕ್ರಮ ನಡೆಸಿಕೊಂಡು ಹೋಗಲಾಗುತ್ತಿದೆ. ಇನ್ನು ಸುದೀಪ್ ಅವರ ವಾರಾಂತ್ಯದ ಕಾರ್ಯಕ್ರಮವನ್ನು ನಮ್ಮ ನಾಯಕರ ಮೇಲರಿಮೆಗೆ ತಕ್ಕಂತೆ ರೂಪಿಸಲಾಗಿದೆ. ಈ ಬಗ್ಗೆ ಟೀಕೆ ಮಾಡಿದರೆ ನಮ್ಮ ಕನ್ನಡ ಚಿತ್ರರಂಗದ ಕೆಲವರು ಹೇಳುವಂತೆ 'ನಿಮಗಿಷ್ಟವಿಲ್ಲದಿದ್ದರೆ ನೋಡಬೇಡಿ ಅಷ್ಟೇ, ನಾವೇನೂ ಕನ್ನಡಿಗರ ಬುದ್ಧಿಮತ್ತೆಯನ್ನು ಹೆಚ್ಚಿಸುವ ಜವಾಬ್ದಾರಿ ಹೊತ್ತಿಲ್ಲ' ಎಂಬ ಉತ್ತರ ಸಿಗಬಹುದೇನೋ?

—ಎಂ.ಜಿ. ಶ್ರೀನಾಥ್, ಮೈಸೂರು

## ವಾರ್ತಾ ವಾಚಕರ ಅಜ್ಞಾನ

ನಟ ಅಂಬರೀಷ್ ಅವರ ಚಿತಾ ಭಸ್ಮದ ವಿಸರ್ಜನೆಯ ಸುದ್ದಿ ಓದುತ್ತಿದ್ದ ಟಿ.ವಿ. ವಾರ್ತಾ ವಾಚಕರಿಗೆ ಅಸ್ಥಿ ವಿಸರ್ಜನೆ ನಡೆಯುತ್ತಿದ್ದ ಜಾಗ ಯಾವುದೆಂದು ತಿಳಿಯಲಿಲ್ಲವೆಂದು ಕಾಣುತ್ತದೆ. ಅವರು ಒಮ್ಮೆ ಶ್ರೀರಂಗಪಟ್ಟಣದ ಸಂಗಮ ಎಂದು ಹೇಳಿದರೆ ಮತ್ತೊಮ್ಮೆ ಕೊಳವೆಂದೂ, ನಂತರ ಶ್ರೀರಂಗ ಪಟ್ಟಣದ ಕಾವೇರಿಯಲ್ಲೆಂದೂ ಓದಿದರು. ವಾಸ್ತವವಾಗಿ ಅಸ್ಥಿ ವಿಸರ್ಜನೆ ನಡೆದದ್ದು ಪಶ್ಚಿಮ ವಾಹಿನಿಯ ಕೊಳಲು ಗೋಪಾಲಕೃಷ್ಣ ದೇವಾಲಯದ ಬಳಿಯ ಸೋಪಾನದಲ್ಲಿ.

– ಕೊ.ಸು.ನರಸಿಂಹ ಮೂರ್ತಿ, ಮೈಸೂರು

## ತಿಳಿವಳಿಕೆ ಇರಲಿ

ಪುಟ್ಟಗೌರಿ ಮದುವೆ ಧಾರಾವಾಹಿಯ ಪಾತ್ರಧಾರಿಗಳಲ್ಲಿ ಇತ್ತೀಚಿನ ಸೇರ್ಪಡೆ ಒಬ್ಬ ಗತ್ತಿನ ಐ.ಪಿ.ಎಸ್. ಅಧಿಕಾರಿ ಹಾಗೂ ಇಬ್ಬರು ಹಾಸ್ಯ ನಟರಾದ ಕಾನ್‌ಸ್ಟೇಬಲ್‌ಗಳು. ಅದು ಸರಿ, ಆದರೆ ನನಗೆ ತಿಳಿದ ಮಟ್ಟಿಗೆ ಐ.ಪಿ.ಎಸ್. ಮಟ್ಟದ ಅಂದರೆ ಸಮವಸ್ತ್ರದ ಭುಜದ ಪಟ್ಟಿ ಮೇಲೆ ಅಶೋಕ ಚಿಹ್ನೆ ಹಾಗೂ ನಕ್ಷತ್ರಗಳನ್ನು ಧರಿಸಿರುವ ಅಧಿಕಾರಿ ಯಃಕಶ್ಚಿತ್ ಒಂದು ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಕೆಲ್ಸ ಮಾಡುತ್ತಿರುವ ನಿದರ್ಶನಗಳಿಲ್ಲ. ಹಾಗೂ ಸಾಧ್ಯವೂ ಇಲ್ಲ. ಜೊತೆಗೆ ಅಲ್ಲಿನ ಪಾತ್ರಧಾರಿಗಳಲ್ಲಿ ಕೆಲವರು ಅವರನ್ನು ಪೊಲೀಸ್ ಇನ್ಸ್‌ಪೆಕ್ಟರ್ ಅಂತಾನೂ, ಇನ್ನು ಕೆಲವರು ಸೂಪರಿಂಟೆಂಡೆಂಟ್ ಸಾಹೇಬರು ಅಂತಾನೂ ಸಂಬೋಧಿಸುವುದು ಸಮಂಜಸವಲ್ಲ. ಇಷ್ಟೊಂದು ತಲೆಕೆಡಿಸಿಕೊಂಡು ಹನುಮಂತ, ರಾವಣನ ಎದುರು ಬೆಳೆಸಿದ ಬಾಲದಂತೆ ಧಾರಾವಾಹಿಯನ್ನು ಬೆಳೆಸುತ್ತಿರುವ ನಿರ್ದೇಶಕರು ಒಬ್ಬ ಐ.ಪಿ.ಎಸ್ ಅಧಿಕಾರಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುವುದಿಲ್ಲವೆಂಬ ಕನಿಷ್ಠ ಅನುಭವವೂ ಇಲ್ಲದೆ ನಿರ್ದೇಶನ ಮಾಡಿರುವುದು ಸರಿಯಲ್ಲ.

ರಾವಣಿ ನಾಗೇಂದ್ರ, ಮೈಸೂರು

## ಸುಂದರ ಅಭಿನಯ

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಡ್ರಾಮ ಜ್ಯೂನಿಯರ್' ಚೆನ್ನಾಗಿ ಮೂಡಿಬರುತ್ತಿದೆ. ಕಳೆದ ವಾರದ ಸಂಚಿಕೆಯಲ್ಲಿ ಪ್ರಸಾರವಾದ ಸಾಧಕರ ಬದುಕನ್ನು ಆಧರಿಸಿದ ನಾಟಕವನ್ನು ಮಕ್ಕಳು ಸುಂದರವಾಗಿ ಅಭಿನಯಿಸಿ ತೋರಿಸಿದರು. ಮುಂದಿನ ವಾರಗಳಲ್ಲಿ ಇನ್ನಷ್ಟು ಹೊಸ ವಿಷಯ ಆಧರಿಸಿದ ನಾಟಕವನ್ನು ಮಕ್ಕಳಿಂದ ನಿರೀಕ್ಷಿಸುತ್ತೇವೆ.

– ವಿಜಯಲಕ್ಷ್ಮಿ ಜಿ.ಎಂ., ಬೆಂಗಳೂರು

## ಸೂಪರ್ ಕ್ಲೈಮಾಕ್ಸ್ !

ಧಾರಾವಾಹಿ ಎಂದರೆ ಒಂದು ಕತೆಯ ಕಂತುಗಳನ್ನು ಹೆಚ್ಚು ಮಾಡುವುದೇ ನಿರ್ದೇಶಕರ ಜಾಣ್ಮೆಯಾಗಿದೆ. ಇಲ್ಲಿ ಒಂದು ಕಂತಿನಲ್ಲಿ ಕುತೂಹಲ ಕ್ಲೈಮಾಕ್ಸ್ ತಂದು, ವೀಕ್ಷಕರು ಉಸಿರು ಬಿಗಿಹಿಡಿದು ನೋಡುವಂತೆ ಮಾಡುವ ಪ್ರತಿಭಾ ಪ್ರದರ್ಶನ ಸಾಧ್ಯವಿಲ್ಲ ಎಂದು ತಿಳಿದವರಿಗೆ ನ.೨೬ರ 'ಮಗಳು ಜಾನಕಿ' ಸೀರಿಯಲ್ ಅಚ್ಚರಿ ಮೂಡಿಸಿದೆ. ಕೇವಲ 20 ನಿಮಿಷದ ಕಂತು ಹಾಗೆ ಮಾಡಿತು.

ಇಲ್ಲಿ ಒಂದೇ ಸೆಟ್ಟಲ್ಲಿ ಮಾತಿಲ್ಲದ ನಟನಟಿಯರ ಅಭಿನಯ, ನಿರಂಜನ ಹೇಳುವ ಘಟನೆ, ಅದನ್ನು ಕೇಳುತ್ತಾ ಕ್ಷಣಕ್ಷಣಕ್ಕೂ ಇದು ತಮ್ಮದಾ ಎನ್ನುವಂತೆ ಪಾತ್ರಧಾರಿಗಳ ತಳಮಳ ಒಂದು ರೀತಿ ಸೂಪರ್. ಸೀತಾರಾಂ ಅವರೇ ಇದು ನಿಮ್ಮ ಕೌಶಲ. ಸೀರಿಯಲ್‌ಗಳು ಸಿನಿಮಾಕ್ಕಿಂತ ಕಡಿಮೆ ಇಲ್ಲ ಎಂದು ತೋರಿಸಿದಿರಿ

– ಸತ್ಯಬೋಧ, ಬೆಂಗಳೂರು